
# ಬಾಡಿಗೆ ಮನೆ





■ ಗುಂಡುರಾವ್ ದೇಸಾಯಿ
ಕಲೆ: ಸಂತೋಷ್ ಸಸಿಹಿತ್ಲು

ನಮಸ್ಕಾರ ಸರ್, ನಾನು ಪದ್ದು ಉರ್ಫ ಪದ್ಮನಾಭ ಅಂತ ಮೇಷ್ಟ್ರು, ತಮ್ಮ ಮನೆ ಬಾಡಿಗೆ ಕೊಡುವುದಿದೆ ಅಂತ ತಿಳಿತು...' ಎಂದ ಪದ್ದು.

ಉದಾಸೀನತೆಯಿಂದ 'ಮೇ...ಷ್ಟ್ರಾ...ಆ...! ನಿಮ್ಮ ಸ್ಟೇಟಸ್‌ಗೆ ತಕ್ಕುದಾದ ಮನೆ ಇಲ್ಲಿಲ್ಲ?' ಅಂದ್ರು ಓನರ್ರು.

'ಹೇ, ಹಾಗೆನ್ನಬೇಡಿ, ನಾನು ಹೈಸ್ಕೂಲ್ ಮೇಷ್ಟ್ರು. ಕೈತುಂಬಾ ಸಂಬಳ ಇದೆ, ಜೊತೆಗೆ ಊರಲ್ಲಿ ಸಾಕಷ್ಟು ಆಸ್ತೀನೂ ಇದೆ'.

'ಹೌದಾ? (ಬಿರು ದೃಷ್ಟಿಯಿಂದ ನೋಡತಾ) ಕೂಡ್ರಿ, ನಾವು ಮನಿನ ಓನ್ಲಿ ಆಫೀಸರ್ಸ್‌ಗೆ ಅಷ್ಟೇ ಕೊಡೋದು. ನೋಡೋಕೆ ಒಳ್ಳೇರ ತರಹ ಕಾಣ್ತೇರಿ...'

'ಒಳ್ಳೇರ ತರಹ ಅಲ್ರೀ, 24 ಕ್ಯಾರೆಟ್ ಗೋಲ್ಡ್ ತರಹ ಒಳ್ಳೆಯವನು'.

'ಹೌದು... ನಿಮ್ಮ ಜಾತಿ?'

'ಈ ಆಕಾರ ನೋಡಿದ್ರ ಗೊತ್ತಾಗಲ್ವೇ?'

'ಓಹೋ... ಅವರಾ, ವರ್ಕೌಟ್ ಆಗಲ್ಲರಿ, ನೀವು ಅತಿ ಮಡಿ ಮಾಡೋರು'.

'ಹೇ ಅವೆಲ್ಲ ಬಿಟ್ಟು ಸುಮಾರ ದಿವಸ ಆಯ್ತುರಿ'.

'ಮನೆಯಲ್ಲಿ ಎಷ್ಟು ಮಂದಿ ಇರುತೀರಿ'.

'ಹೆತ್ತವರು, ಹೆಂಡತಿ, ಹಡದ ಮಕ್ಕಳು'.

'ನಾಚಿಕೆ ಬರುತ್ತೇನ್ರಿ ಹೇಳಾಕ, ಹೆತ್ತವರನ್ನ ಇದ್ದ ಊರಲ್ಲೆ ಬಿಟ್ಟ ಬರಬೇಕು. ಅವನ್ನ ಕರಕೊಂಡು ಅಡ್ಡಾಡೊದಾ?'

'ಅಂತಹ ಸಂಸ್ಕಾರ ಹೆತ್ತವರು ಕಲಿಸಲೇ ಇಲ್ಲರಿ...'

'ಮಂದಿ ಬಾಳಾ ಆದಂಗಾತು. ಅವರಿಗೆ ದಮ್ಮ, ಕೆಮ್ಮ ಕಾಯಿಲೆ, ಕಸಾಯಿ ಇದೇನ್ರಿ? ಹಾಂಗಿದ್ರ ನೀವು ಮುಂದೆ ಹೋಗಬಹುದು'.

'ಅಂತಹ ಯಾವುದು ಇಲ್ಲರಿ, ಭವಿಷ್ಯನ ಕಂಡೋರು ಯಾರಾದರೂ ಇದ್ದರೇನ್ರೀ?'

'ಅಂತೋರಿದ್ರೆ ಮನೆ, ವಠಾರ ಗಲೀಜು ಮಾಡ್ತಾರಿ'.

'ಕಾಯಿಲೆ ಬೀಳದ ಮನುಷ್ಯರಿದ್ದಾರೇನ್ರಿ?'

'ಅದಕ ನಮ್ಮ ಹೆತ್ತವರನ್ನ ಅನಾಥಾಶ್ರಮಕ್ಕ ಸೇರಿಸಿನ್ರಿ'.

'ತಾವು ದೊಡ್ಡ ಹೃದಯದವರು ಸರ್, ಅಂತಹ ಹೃದಯ ಇಲ್ವೇ?'

'ಸರಿ ಕಮ್ ಟು ದಿ ಪಾಯಿಂಟ್, ಕುಲ, ಗೋತ್ರ, ಹಿಂದು, ಮುಂದು ತಾಳೆ ಹಾಕಿ ಕೂಡಿಸಿ, ಕಳೆದು, ಗುಣಿಸಿ ಭಾಗಿಸಲಾಗಿ. ಸದರಿ ಮನೆಗೆ 9000 ರೂ ಬಾಡಿಗೆ, 50000 ರೂ ಮುಂಗಡ ಹಣ, ಬಣ್ಣ ಹಚ್ಚಿದ ಬಾಬತ್ತು 10000 ರೂ, ಇವಿಷ್ಟು ಕೊಡಬೇಕು. ಒಪ್ಪಿಗೆ ತಾನೆ?'

'ಅಯ್ಯ! ಏನ್ರಿ ಅನ್ಯಾಯ? ಅತ್ತ ಪಟ್ಟಣವೂ ಅಲ್ಲದ, ಇತ್ತ ಹಳ್ಳಿಯೂ ಅಲ್ಲದ ಈ ಊರಲ್ಲಿ 5000 ರೂ ಕೊಡೋ ಮನೆಗೆ ಇಷ್ಟೆಲ್ಲ ಕೊಡಬೇಕಾ? ನಿಮ್ಮ ಮನೆಗೆ ನೀವು ಬಣ್ಣ ಹಚ್ಚಿದ್ದಕ್ಕೆ ನಾವು ಕೊಡಬೇಕಾ?'

'ಹೌದೂ... ನಾವು ಕರದಿದ್ದವಾ, ಮನಿಗೆ ಬಾಡಿಗೆ ಬರ್ರೀ ಅಂತ'.

'ಛೇ ಹಾಂಗನ್ನಬೇಡಿ. ಪರವೂರು ಪ್ರಾಣ ಸಂಕಟ ಅನ್ನೊಹಾಂಗ, ನಮ್ಮಂತವರ ಬಗ್ಗೆ ಕರುಣೆ ತೋರಬೇಕುರಿ'.

'ಬಸ್ಸಿನಲ್ಲಿ ಪ್ರಯಾಣ ಮಾಡಬೇಕಾದ್ರೆ ಜನರ ಮೇಲೆ ಟಿಕೇಟ್ ತಗಸ್ತಿರಿ ತಾನೆ?'

'ಹೌದು'.

'ಹಾಗೇನೆ. ನಿಮ್ಮ ಮನೆಯಲ್ಲಿ ಇರೋ ಜನ, ಬರೋರು ಹೋಗೋರು ಎಲ್ಲ ಲೆಕ್ಕಾ ಹಾಕಿ ಹೇಳಿದ್ದು. ಜೊತೆಗೆ ಮನಿ ಹೊಲಸು ಮಾಡಂಗಿಲ್ಲ, ನೀರು ಕಂಡಾಂಗ ಚೆಲ್ಲಂಗಿಲ್ಲ, ಗೋಡೆಗೆ ಮೊಳೆ ಹೊಡೆಂಗಿಲ್ಲ, ಮನಿಗೆ ಬರೊ ಜನ ಹೆಚ್ಚಾಗಂಗಿಲ್ಲ, ಏನಾದ್ರೂ ಡ್ಯಾಮೇಜು ಆಯ್ತೋ ಅದನ್ನು ನೀವು ಕೊಟ್ಟ ಅಡ್ವಾನ್ಸದಲ್ಲಿ ಮುರುಕೊಂತಿವಿ. ಇಷ್ಟ ಇದ್ರೆ ಈ ಅಗ್ರಿಮೆಂಟ್ ಡೀಡ್ ಮೇಲೆ ಸಹಿ ಮಾಡ್ರಿ. ನಿಮಗಂತ ಇಷ್ಟು, ಬೇರೆಯವರು ಆಗಿದ್ರ...?'